

ಬಾಕಿ ಎಲ್ಲ ನುಣ್ಣಗೆ ಶೇವ್ ಮಾಡಿಸಿ ಮನೆಗೆ ಹೋದ. ಅವನ ಅವತಾರವನ್ನು ಕಂಡ ಪುಟ್ಟಮ್ಮಜ್ಜಿ 'ಏ ಇದೆಂತಾ ಹೇಸಿಗೆ. ಒಳ್ಳೆ ನೊಣ ಕೂತಂಗೆ ಕಾಣುತ್ತೆ. ಮೊದ್ಲು ಹೋಗಿ ಹೆರಿಸ್ಗಂಡ್ ಬರೋಗು' ಎಂದಿತ್ತು.

ಈ ನಡುವೆ ಹೊಸಳ್ಳಿ ಸತೀಶ್ ಅವರ ಸಂಪರ್ಕ ಕಳೆದುಕೊಳ್ಳದಂತೆ ವರದರಾಜು ಸಲಹೆ ನೀಡಿದ್ದ. ಅವನ ಮುಖಾಂತರ ಇನ್ನೂ ಹಲವರ ಸಂಪರ್ಕ ಸಾಧಿಸಿ ಚಲಾವಣೆಯಲ್ಲಿರಬಹುದೆಂದು ಹೇಳಿಕೊಟ್ಟಿದ್ದ. ಅದರಂತೆಯೇ ಹುಚ್ಚೇಗೌಡನೇ ಮುತುವರ್ಜಿ ವಹಿಸಿ ಚಂಪಕ ನಗರದ ಮಲ್ನಾಡ್ ಕಾಮರ್ಸ್ ಕಾಲೇಜಿನಲ್ಲಿ ಹೊಸಳ್ಳಿ ಸತೀಶ ಅವರ ಸಾಹಿತ್ಯ ಕೃತಿಗಳ ಕುರಿತು ವಿಚಾರ ಸಂಕಿರಣ ಏರ್ಪಾಡಾಗುವಂತೆ ಮಾಡಿದ್ದ. ಸಾಹಿತಿ ರುದ್ರೇಗೌಡ, ಸಂಪಾದಕ ಶ್ರೀನಿವಾಸ ಮೂರ್ತಿ ಹಾಗೂ ಜಿಲ್ಲೆಯಲ್ಲಿ ಸಾಹಿತ್ಯದ ಬಗ್ಗೆ ಮಾತಾಡುವ ಬಂದಿಬ್ಬರನ್ನು ಅತಿಥಿಗಳಾಗಿ ಆಹ್ವಾನಿಸಲಾಗಿತ್ತು. ಕಾರ್ಯಕ್ರಮ ಮುಗಿದ ಮೇಲೆ ಹುಚ್ಚೇಗೌಡನ ಗೆಳೆಯನ ರೆಸಾರ್ಟಿನಲ್ಲಿ ಗುಂಡು ಪಾರ್ಟಿ. ಅದೆಲ್ಲದರ ಓಡಾಟ ಹುಚ್ಚೇಗೌಡನದೇ. ಅಂದು ಪಾರ್ಟಿಯಲ್ಲಿ ಅವನು ಕುಳಿತು ತನ್ನ ಬಗ್ಗೆ ಎಲ್ಲಾ ಹೇಳಿಕೊಂಡು ಅವರಿಗೆ ಹತ್ತಿರದವನಾಗುವ ಸಂದರ್ಭ ಬಳಸಿಕೊಂಡಿದ್ದ.

ಶ್ರೀನಿವಾಸ ಮೂರ್ತಿ 'ನೀವು ಪೋಸ್ಟಿನಲ್ಲಿ ಕಳಿಸಿದರೆ ಆ ಲೇಖನಗಳು ಎಲ್ಲೆಲ್ಲಿ ಬಿದ್ದಿರುತ್ತವೋ. ಆ ಯಮ್ಮನೂ ಬಿಜಿ ಇರ್ತಾಳೆ. ಮುಂದಿನ ಸಲ ನೀವೇ ಖುದ್ದು ಹೋಗಿ ಪಂಕಜಮ್ಮನ ಕೈಗೇ ಕೊಟ್ಟು ಬನ್ನಿ. ನಾನೂ ಹೇಳಿರ್ತೀನಿ' ಎಂದರು. ರುದ್ರೇಗೌಡ 'ಇರ್ಲಿ ಬಿಡಿ. ಇನ್ನೊಮ್ಮೆ ಬಿಡುವಾಗಿ ಸಿಕ್ಕಿ. ಆಮೇಲೆ ಮಾತಾಡಣ' ಎಂದಿದ್ದರು. ಅವನಿಗೆ ಅಷ್ಟೇ ಸಾಕಾಗಿತ್ತು. ಮರುವಾರವೇ ರುದ್ರೇಗೌಡನಿಗೆ ಒಂದು ಪಾರ್ಟಿ ಏರ್ಪಡಿಸಿದ್ದ. ಕೆಲವೇ ದಿನಗಳಲ್ಲಿ ರುದ್ರೇಗೌಡ ನೇತೃತ್ವದ 'ಬರಹಗಾರರ ಕೂಟ'ಕ್ಕೆ ಸಂಘಟನಾ ಕಾರ್ಯದರ್ಶಿಯೂ ಆಗಿ ಹೋದ.

ಶ್ರೀನಿವಾಸ ಮೂರ್ತಿಯವರ ಕೈಯಲ್ಲಿ ಪಂಕಜಮ್ಮನಿಗೆ ಫೋನ್ ಮಾಡಿಸಿ ಶಿಫಾರಸು ಮಾಡಿಸಿದ್ದ. 'ದುಡ್ಡಿನ ಮುಂದೆ ಬರೀ ಮಾತಿಗೆ ಏನು ಬೆಲೆ?' ಎಂದು ವರದರಾಜ ಖುದ್ದಾಗಿ ಹುಚ್ಚೇಗೌಡನನ್ನು ಪಂಕಜಮ್ಮನ ಬಳಿ ಕರೆದುಕೊಂಡು ಹೋದ. ಹುಚ್ಚೇಗೌಡನನ್ನು ಹೊಸ್ಮನೆ ಮದನ್ ಕುಮಾರ್ ಎಂದು ಪರಿಚಯ ಮಾಡಿಸಿದ. 'ಒಳ್ಳೆಯ ಬರವಣಿಗೆ ಮಾಡ್ತಾರೆ' ಎನ್ನುತ್ತಾ ಲೇಖನವಿದ್ದ ಲಕೋಟೆಯನ್ನು ಹುಚ್ಚೇಗೌಡನ ಕೈನಿಂದ ಪಡೆದು ತಾನೇ ಅವಳಿಗೆ ಹಸ್ತಾಂತರಿಸಿದ. ಅದರೊಳಗೆ ಇಟ್ಟಿದ್ದ ಐನೂರರ ನೋಟಿನ ತುದಿ ಹೊರಗೆ ಇಣುಕುತ್ತಿತ್ತು. ಪಂಕಜಮ್ಮ ಲಕೋಟೆಯನ್ನು ತನ್ನ ಬಳಿಗೆ ಎಳೆದುಕೊಳ್ಳುತ್ತಾ 'ಇರ್ಲಿ ಬಿಡಿ ನೋಡ್ತೀನಿ... ಮುಂದೆ ಏನಾದ್ರೂ ಕಳಿಸುವುದಾದರೆ ಡಿಟಿಪಿ ಮಾಡಿಸಿ ಮೇಲ್ ಮಾಡಿ ಬಿಡಿ' ಎಂದಿದ್ದಳು. 'ಇನ್ನೇನು ನಿಮ್ಮ ಅದೃಷ್ಟ ಖುಲಾಯಿಸಿತು ಬಿಡಿ ಗೌಡ್ರೆ' ಎಂದು ವರದರಾಜ ಹರಿದುಂಬಿಸಿದ್ದ.

ವರದರಾಜನಿಗೆ 'ನಕ್ಷತ್ರ'ದಲ್ಲಿ ಊಟ ಕೊಡಿಸಿ ಕಳಿಸಿ, ತಾನು ಸೆಲೂನಿಗೆ ಹೋಗಿ ಒಂದು ವಾರದಿಂದ ಬೆಳೆದಿದ್ದ ಕುರುಚಲು ಗಡ್ಡ ಹೆರೆಸಿ ಧಾರವಾಡದ ಯಾರೋ ಸಾಹಿತಿಯಂತೆ ಗಲ್ಲದ ತುದಿಯಲ್ಲಿ ಸ್ವಲ್ಪವೇ ಸ್ವಲ್ಪ ದಾಡಿ ಬಿಡಿಸಿಕೊಂಡ.

ಅಂದು ಸಂಜೆ ಮೊಮ್ಮಗನ ಬಳಿ ಮೊಬೈಲ್ ಬಗ್ಗೆ ಪಾಠ ಹೇಳಿಸಿಕೊಳ್ಳುತ್ತಿದ್ದ. ಅಕ್ಷರಗಳೇ ಇಲ್ಲದೆ ಬರೀ ಇಮೋಜಿಗಳನ್ನೇ ಬಳಸಿ ಹೇಗೆ ಕಾಮೆಂಟ್ ಮಾಡುವುದು ಎಂಬ ಬಗ್ಗೆ ಅವನು ತಾತನಿಗೆ ಹೇಳಿಕೊಡುತ್ತಿದ್ದ. ಅಷ್ಟರಲ್ಲಿ ಆಫೀಸು ಮುಗಿಸಿ ಅಲ್ಲಿಗೆ ಬಂದ ದಾಕ್ಷಾಯಿಣಿ 'ಏನಾ ಪುಟ್ಟು, ತಾತನಿಗೆ ಏನೋ ಪಾಠ ಮಾಡ್ತಾ ಇದೀಯ. ಏನ್ ದಿನಕ್ಕೊಂದು ಸ್ಟೈಲ್ ಮಾಡ್ತಾ ಇದಾರಲ್ಲ ನಿಮ್ ತಾತ. ಅದನ್ನೂ ನೀನೇ ಹೇಳಿಕೊಡ್ತೀಯ' ಎಂದು ತಮಾಷೆ ಮಾಡಿದಳು. ಹುಚ್ಚೇಗೌಡ ತಲೆಯೆತ್ತಿ ಮಗಳ ಮುಖ ನೋಡಿದ. 'ನೋಡಾ ಪುಟ್ಟು, ಈ ಸಲ ಗಡ್ಡ ಹೆಂಗ್ ಬಿಟ್ಕಂಡಿದಾರೆ ನಿಮ್ ತಾತ. ಹೆಂಗ್ ಕಾಣುತ್ತೆ?' ಎಂದಳು.

ಅವನು ತಾತನಿಗೆ ಸಲಹೆಗಾರನಂತೆಯೇ ವಿಮರ್ಶಕನೂ ಆಗಿದ್ದ.

'ಒಳ್ಳೆ ಹೋತನ ಗಡ್ಡ ಇದ್ದಂಗೆ ಐತೆ' ಎಂದು ಬಿಟ್ಟ. ಹುಚ್ಚೇಗೌಡನಿಗೆ ಮುಜುಗರವಾಯಿತು. ಇದೆಲ್ಲಾ ಬೇಡ ಪೂರ್ತಿ ಗಡ್ಡ ಬಿಡುವುದೇ ಒಳ್ಳೆಯದು ಎಂದು ಯೋಚಿಸುತ್ತಾ ಕೆನ್ನೆ ಸವರಿಕೊಂಡ.